ಸಂಸ್ಥೆಗಳು ಒಳ್ಳೆಯ ಸೇವೆಯನ್ನು ಸಲ್ಲಿಸುತ್ತಿರುವುದರಿಂದ ಸರ್ಕಾರ ಅದಕ್ಕೆ ಬೆಂಬಲಿಸುವುದಕ್ಕೆ ಸಿದ್ದವಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೆ. ಗೋಪಾಲ ಭಂಡಾರಿ : ಈಗಾಗಲೇ ಸರ್ಕಾರಿ ಶಾಲೆಯಲ್ಲಿರುವಂತೆ ಖಾಸಗಿ ಶಾಲೆಯಲ್ಲಿಯೂ ಕೂಡ ಒಬ್ಬ ಅಧ್ಯಾಪಕರಿಗೆ ಇಷ್ಟೇ ವಿದ್ಯಾರ್ಥಿಗಳು ಇರುವಂತೆ ಮಾಡಬೇಕು. ಹೆಚ್ಚು ಕಡಿಮೆ ಏತಕ್ಕಾಗಿ ಮಾಡುತ್ತೀರಿ ಎಂಬುದು ನಮ್ಮ ಪ್ರಶ್ನೆಯಾಗಿದೆ.

ಅಧ್ಯಕ್ಷರು : ಆಯಿತು. ನಿಮ್ಮ ಪ್ರಶ್ನೆ ಮುಗಿಯಿತು. ಈಗ ಮಾನ್ಯ ವೆಂಕಟಸ್ವಾಮಿಯವರನ್ನು ನಾನು ಕರೆದಿದ್ದೇನೆ.

ದೇವನಹಳ್ಳಿಯಲ್ಲಿ ಹೊಸ ವಿಶ್ವವಿದ್ಯಾನಿಲಯ ಸ್ಥಾಪನೆ ಬಗ್ಗೆ

41 (342) ಶ್ರೀ ವೆಂಕಟಸ್ವಾಮಿ (ದೇವನಹಳ್ಳಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ತಾಲ್ಲೂಕಿನಲ್ಲಿ ಹೊಸದಾಗಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದಿದೆಯೇ;

ಆ) ಇದ್ದರೆ ಯಾವಾಗ ಪ್ರಾರಂಭಿಸಲಾಗುವುದು (ವಿವರ ಒದಗಿಸುವುದು);

ಇ) ಹೊಸ ವಿಶ್ವವಿದ್ಯಾಲಯಕ್ಕೆ ಸರ್ಕಾರಿ ಜಾಗವನ್ನು ಗುರುತಿಸಲಾಗಿದೆಯೇ (ವಿವರ ಒದಗಿಸುವುದು);

ಈ) ದೇವನಹಳ್ಳಿ ಮತ ಕ್ಷೇತ್ರಕ್ಕೆ ಹೊಸದಾಗಿ ಪದವಿ ಕಾಲೇಜು ಮಂಜೂರು ಮಾಡುವ ಉದ್ದೇಶ ಸರಕಾರಕ್ಕೆ ಇದೆಯೇ;

ಉ) ಹಾಗಿದ್ದರೆ, ಪ್ರಸಕ್ತ ಸಾಲಿನಲ್ಲಿಯೇ ಕಾಲೇಜನ್ನು ಪ್ರಾರಂಭಿಸಲಾಗುವುದೇ;

ಊ) ಇದಕ್ಕೆ ತಗಲುವ ಅನುದಾನ ಎಷ್ಟು?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಪ್ರಸ್ತಾವನೆಯು ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಈಗಾಗಲೇ ಪ್ರಾರಂಭಿಸಿರುವ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗಿದ್ದು, ಅಗತ್ಯತೆಗನುಗುಣವಾಗಿ ಆರ್ಥಿಕ

ಇಲಾಖೆಯೊಂದಿಗೆ ಸಮಾಲೋಚಿಸಿ ಅಗತ್ಯವಿರುವೆಡೆ ಪದವಿ ಕಾಲೇಜು ಗಳನ್ನು ಪ್ರಾರಂಭಿಸಲಾಗುವುದು.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

(12-10 P.M.)

ಶ್ರೀ ವೆಂಕಟಸ್ವಾಮಿ : ಮಾನ್ಯ ಅಧ್ಯಕ್ಷರೆ, ನನ್ನ ದೇವನಹಳ್ಳಿ ಕ್ಷೇತ್ರದಲ್ಲಿ ವಿಜಿಪುರ ಪಟ್ಟಣ ಸುಮಾರು 40 ಸಾವಿರ ಜನಸಂಖ್ಯೆಯನ್ನು ಹೊಂದಿದ್ದು ಆ ಪಟ್ಟಣದ ಪಕ್ಕದಲ್ಲಿ 2 ಹೋಬಳಿಗೆ ಸುಮಾರು 80 ಹಳ್ಳಿಗಳು ಬರುತ್ತದೆ. ಪಿಯುಸಿ ಕಾಲೇಜು ಈಗಾಗಲೇ ಪದವಿಪೂರ್ವ ಕಾಲೇಜು ಒಂದು ಸರ್ಕಾರದ್ದು ಇದೆ. ಖಾಸಗಿ ಕಾಲೇಜು 6 ಇದೆ. ಒಟ್ಟು ಪಿಯುಸಿ ಕಾಲೇಜಿನಲ್ಲಿ ಅಂದರೆ. ಪ್ರಥಮ ಪಿಯುಸಿ ಕಾಲೇಜಿನಲ್ಲಿ 1553 ವಿದ್ಯಾರ್ಥಿಗಳು ಇದ್ದಾರೆ. ದ್ವಿತೀಯ ಪಿಯುಸಿಯಿಂದ 788 ವಿದ್ಯಾರ್ಥಿಗಳು ಇದ್ದಾರೆ. ಒಟ್ಟು 1936 ವಿದ್ಯಾರ್ಥಿಗಳು ಇದ್ದಾರೆ. ಈ ವಿದ್ಯಾರ್ಥಿಗಳು ತೀರಾ ಬಡಕುಟುಂಬದಿಂದ ಬಂದವರಾಗಿದ್ದಾರೆ. ನನ್ನ ಕ್ಷೇತ್ರವು Reserve Constituency ಆಗಿರುವುದರಿಂದ ರೈತರ ಮಕ್ಕಳು ಅಲ್ಲಿ ಇದ್ದಾರೆ. ಇವತ್ತು ನನಗೆ ಬಹಳ ನೋವಾಗುತ್ತದೆ, ಈ ಗ್ರಾಮೀಣ ಪ್ರದೇಶದಲ್ಲಿ ಮಕ್ಕಳನ್ನು ಓದಿಸಬೇಕಾದರೆ ಬಹಳ ಕಷ್ಟವಿದೆ. ಆದರೆ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಓದುತ್ತಿರಬೇಕಾದರೆ ಅಲ್ಲಿ ಒಂದು ಪದವಿಪೂರ್ವ ಕಾಲೇಜು ಸಹ ಇರುವುದಿಲ್ಲ. ಆದ್ದರಿಂದ ದಯಮಾಡಿ ಅಗತ್ಯವಿದ್ದರೆ ನಾವು ಕಾಲೇಜನ್ನು ಪ್ರಾರಂಭ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇವತ್ತು ತಾವು ಯೋಚನೆಯನ್ನು ಮಾಡಬೇಕು. ಇಲ್ಲಿ ಅದರ ಅಗತ್ಯವಿಲ್ಲವೇ? ಎಂಬುದರ ಬಗ್ಗೆ ತಾವು ಯೋಜನೆಯನ್ನು ಮಾಡಿ ನನಗೆ ಆದಷ್ಟು ಬೇಗನೆ ಪದವಿ ಕಾಲೇಜನ್ನು ವಿಜಿಪುರ ಪಟ್ಟಣಕ್ಕೆ ಮಾಡಿಕೊಡ ಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) (ಉನ್ನತ ಶಿಕ್ಷಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ವೆಂಟಕಸ್ವಾಮಿಯವರ ಮೊದಲನೆಯ ಪ್ರಶ್ನೆ ದೇವನಹಳ್ಳಿ ತಾಲ್ಲೂಕಿಗೆ ಒಂದು ವಿಶ್ವವಿದ್ಯಾನಿಲಯವನ್ನು ಕೊಡಬೇಕೆಂದು ಇದೆ. ಇದನ್ನು ಯಾವಾಗ ಪ್ರಾರಂಭಿಸುತ್ತೀರಿ? ಹೊಸ ಯೂನಿವರ್ಸಿಟಿಯನ್ನು ಮಾಡುವ ಬಗ್ಗೆ ಸರ್ಕಾರ ಜಾಗವನ್ನು ಗುರುತಿಸಿದ್ದೀರಾ, ಎಂದು ಕೇಳಿದ್ದಾರೆ. ಇದರಲ್ಲಿ ಎರಡು

ಭಾಗವಿದೆ. ಅದಕ್ಕಾಗಿ ನಾನು ಸ್ಪಷ್ಟಪಡಿಸುತ್ತಿದ್ದೇನೆ. ದೇವನಹಳ್ಳಿಗೆ ಹೊಸ ವಿಶ್ವವಿದ್ಯಾನಿಲಯವನ್ನು ಕೊಡಬೇಕೆಂಬ ಬೇಡಿಕೆಯನ್ನು ಅವರು ಮುಂದಿಟ್ಟಿದ್ದಾರೆ, ಒಂದು ಹೊಸ ವಿಶ್ವವಿದ್ಯಾನಿಲಯವನ್ನು ದೇವನಹಳ್ಳಿಯಲ್ಲಿ ಪ್ರಾರಂಭಿಸುವ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆಯೂ ಇಲ್ಲ. ನಾವು ಸ್ಥಳ ಗುರುತಿಸುವಂತಹ ಇತ್ಯಾದಿ ಪ್ರಶ್ನೆಗಳು ಉದ್ಭವವಾಗುವುದಿಲ್ಲ. ಆದರೆ ಅವರು ಒಂದು ಕೇಳಿರುವಂತಹ ಪ್ರಶ್ನೆಯೊಳಗಡೆ ಒಂದು ಸೂಕ್ಷ್ಮತೆಯು ಅಡಗಿದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಬೈಫರ್‌ಕೇಟ್ ಮಾಡುವ ಬಗ್ಗೆ ಪ್ರೊ: ರುದ್ರಯ್ಯರವರ ಸಮಿತಿಯು ರಚನೆಯಾಗಿ 3 ವಿಶ್ವವಿದ್ಯಾನಿಲಯವನ್ನು ಮಾಡಿದರೆ ಒಳ್ಳೆಯದು ಎಂದು ಒಂದು ವರದಿಯನ್ನು ಕೊಟ್ಟಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಅದನ್ನು ಏನಾದರೂ ದೇವನಹಳ್ಳಿಯಲ್ಲಿ ಪ್ರಾರಂಭಿಸಿ ಎಂದು ಏನಾದರೂ ಇರಬಹುದು. ನಾನು ಅವರಿಗೆ ನೆನಪು ಮಾಡಿಕೊಡುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ : ಅವರು Confuse ಮಾಡಿಕೊಂಡಿರುವುದಿಲ್ಲ. ಏನಾಗಿದೆ ಎಂದರೆ ಬಜೆಟ್ ಪುಸ್ತಕದಲ್ಲಿ ಓದಿದಾಗ ತುಮಕೂರು ಯೂನಿವರ್ಸಿಟಿ ಎಂದು ಹೇಳಿದ್ದಾರೆ, ಎಷ್ಟು ಯೂನಿವರ್ಸಿಟಿಗಳು ಇದೆಯೆಂದು ಹುಡುಕುತ್ತಿದ್ದೇವೆ. ಆದರೆ ಅದರ ಬಗ್ಗೆ ಲೆಕ್ಕವೇ ಸಿಗುತ್ತಿಲ್ಲ. ಅದಕ್ಕೋಸ್ಕರ ಅವರು ಏನಾದರೂ ನಮಗೂ ಒಂದು ಯೂನಿವರ್ಸಿಟಿ ಸಿಗುತ್ತದೆ ಎಂದು ಕೇಳಿರಬಹುದು ಅಷ್ಟೇ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈಗ ರಾಜ್ಯದಲ್ಲಿ 15 ವಿಶ್ವವಿದ್ಯಾನಿಲಯಗಳು ಇವೆ.

ಶ್ರೀ ಎಸ್. ಸುರೇಶ್‌ಕುಮಾರ್ : ಜಾರ್ಖಂಡ್‌ನಲ್ಲಿ ಸುಮಾರು 52 ವಿಶ್ವವಿದ್ಯಾನಿಲಯಗಳು ಇದೆ. ಅವರು ಒಂದೊಂದೆ ಮುಚ್ಚಿಕೊಂಡುಬಿಟ್ಟಿದ್ದಾರೆ. ನಾವು quality ಮತ್ತು need ಗೆ ಅನುಸಾರವಾಗಿ ನಾವು ಕೊಡುತ್ತಿದ್ದೇವೆ.

ಶ್ರೀ ಟಿ.ಬಿ.ಜಯಚಂದ್ರ : ಅದು ಇದ್ದಿದ್ದರೆ ನೀವು ಈ ಬಜೆಟ್‌ನಲ್ಲಿ ಇಷ್ಟೊಂದು ಯೂನಿವರ್ಸಿಟಿಯನ್ನು ಕೊಡುತ್ತಿರಲಿಲ್ಲ. ಈಗ ಚರ್ಚೆಗೆ ಬರುತ್ತದೆಯಲ್ಲಾ, ಕೃಷಿ ವಿಶ್ವವಿದ್ಯಾನಿಲಯವನ್ನು ಶಿವಮೊಗ್ಗಕ್ಕೆ ಮಾಡಿದ್ದಾರೆ, ಅದು ಒಂದೇ ಒಂದು ಕಾಲೇಜು, ಒಂದು ಕಾಲೇಜಿಗೆ ಒಂದು ಯೂನಿವರ್ಸಿಟಿಯೇ? ಇದು ಅಗತ್ಯತೆನಾ? ಇದರ ಅವಶ್ಯಕತೆಯೇ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಶಿವಮೊಗ್ಗ ಮಾಡಿರುವುದು ಅದು need ಇದೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಮುಖ್ಯಮಂತ್ರಿಗಳು ಶಿವಮೊಗ್ಗ ದವರು ಎನ್ನುವ ಕಾರಣಕ್ಕಾಗಿ ಒಂದು ಯೂನಿವರ್ಸಿಟಿ.

ಅಧ್ಯಕ್ಷರು : ಆಯಿತು, ತಾವು ಉತ್ತರವನ್ನು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ವೆಂಕಟಸ್ವಾಮಿಯವರು ಕೇಳಿರುವಂತಹ ಮೊದಲನೆ ಪ್ರಶ್ನೆಗೆ ಉತ್ತರವನ್ನು ನಾನು ಕೊಟ್ಟಿದ್ದೇನೆ. ಅಲ್ಲಿ ಯಾವುದೇ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸುವಂತಹ ಪ್ರಸ್ತಾವನೆಯು ಸರ್ಕಾರದ ಮುಂದೆ ಇಲ್ಲ. ಇನ್ನು ಎರಡನೆಯ ಭಾಗ ಒಂದು ಡಿಗ್ರಿ ಕಾಲೇಜು ಕೊಡಿ ಎಂದು ಅವರು ಹೇಳಿದ್ದಾರೆ. ಆ ಕುರಿತಂತೆ ನಾವು ಪರಿಶೀಲನೆಯನ್ನು ಮಾಡುತ್ತೇವೆ.

ಅಧ್ಯಕ್ಷರು : ಆಯಿತು.

ಅಧ್ಯಕ್ಷರು : ಮಾನ್ಯ ಪ್ರಕಾಶ್ ಬಾಬಣ್ಣ ಹುಕ್ಕೇರಿಯವರ ಪ್ರಶ್ನೆ 42(577) ಗೆ ಮಾನ್ಯ ಸಚಿವರು ಸಮಯವನ್ನು ಕೇಳಿದ್ದಾರೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ನೀವು ನಮ್ಮ ಸಹಾಯಕ್ಕೆ ಬರಬೇಕು. ಕಳೆದ ಅಧಿವೇಶನದಲ್ಲಿಯೂ ನಾನು 2–3 ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕಾಗಿ ನೀವು ಸ್ಪಷ್ಟವಾಗಿ ಯಾವಾಗ ಉತ್ತರವನ್ನು ಕೊಡಿಸುತ್ತೀರೆಂದು ದಯವಿಟ್ಟು ಹೇಳಬೇಕು.

ಅಧ್ಯಕ್ಷರು : ಇದಕ್ಕೆ 15 ದಿವಸದಲ್ಲಿ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಅವರ ಪ್ರಶ್ನೆಯು ತಮ್ಮ ಪೀಠದ ಮುಂದೆಯೂ ಇದೆ. ಮರಾಠಿ ಮತ್ತು ಉರ್ದು, ಕನ್ನಡ ಪ್ರೌಢ ಶಾಲೆಗಳೆಷ್ಟು? ತರಗತಿವಾರು ಮಕ್ಕಳ ಸಂಖ್ಯೆ ಹಾಗೂ ಶಿಕ್ಷಕರ ಸಂಖ್ಯೆಯನ್ನು ಕೊಡಬೇಕು ಈ ರೀತಿಯಾಗಿ ಕೇಳಿದ್ದಾರೆ. ಈಗ ಅವೆಲ್ಲವನ್ನು ಸಂಗ್ರಹಿಸಿ ಕೊಡುತ್ತೇವೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ನಾವುಗಳು ಪ್ರಶ್ನೆಯನ್ನು ಕೇಳುತ್ತೇವಲ್ಲಾ, ಗಡಿಭಾಗದಲ್ಲಿ ಏನು ಮಕ್ಕಳ ಪರಿಸ್ಥಿತಿ ಇದೆ, ಅದನ್ನು ನಾವು ಸರ್ಕಾರದ ಗಮನಕ್ಕೆ ತರುವುದಕ್ಕೆ ನಾವು ಈ ರೀತಿಯಾಗಿ ಪ್ರಶ್ನೆಯನ್ನು ಕೇಳಿದ್ದೇವೆಯೇ ಹೊರತಾಗಿ ಅಲ್ಲಿ ನಾವು ತರಗತಿವಾರು ಅವೆಲ್ಲವು ನಮಗೆ ಗೊತ್ತಿದೆ. ಅಲ್ಲಿ ಶಿಕ್ಷಕರ ಪರಿಸ್ಥಿತಿ ಏನಿದೆ, ತಾವು ಅಲ್ಲಿಗೆ ಏನೇನು ಪತ್ರವನ್ನು